

# ಯುದ್ಧ ಬಿಂಬಗಳ ಪೇಜ್

■ ಪ್ರವೀಣ ಕುಲಕರ್ಣಿ

ವಿಯಟ್ನಾಂ ಯುದ್ಧ ಎಂದೊಡನೆ ಮೊದಲು ನೆನಪಾಗುವುದು ಇಂಗ್ಲೆಂಡ್‌ನ ಫೋಟೊಗ್ರಾಫರ್ ಟಿಮ್ ಪೇಜ್ ಅವರ ಹೆಸರು. ಏಕೆಂದರೆ, ಪೇಜ್ ತೆಗೆದಿದ್ದ ಆ ಐತಿಹಾಸಿಕ ಚಿತ್ರಗಳು ಯುದ್ಧದ ಯಥಾವತ್ತಾದ 'ವರದಿ'ಯನ್ನು ಜಗತ್ತಿನ ಮುಂದೆ ತೆರೆದಿಟ್ಟಿದ್ದವು. ತುಂಬಾ ಭಾರವಾಗಿದ್ದ ಕ್ಯಾಮೆರಾ ಕಿಟ್ ಅನ್ನು ಹೆಗಲಿಗೇರಿಸಿಕೊಂಡು ಅರ್ಧ ಶತಮಾನಕ್ಕೂ ಹೆಚ್ಚು ಸಮಯ ಜಗತ್ತಿನ ಹಲವೆಡೆ ಸುತ್ತಿದ್ದ ಈ ಫೋಟೊಗ್ರಾಫರ್, ವಿಯಟ್ನಾಂ ಯುದ್ಧದಲ್ಲಿ ಮನುಕುಲವನ್ನೇ ಕಾಡುವಂತಹ ಚಿತ್ರಗಳನ್ನು ತೆಗೆದಿದ್ದವರು. ಕಳೆದ ವಾರವಷ್ಟೇ ಅವರು ಕೊನೆಯುಸಿರು ಎಳೆದಾಗ, ಆ ತಲೆಮಾರಿನ ಇತಿಹಾಸಕಾರರ ಮನದಂಗಳದಲ್ಲಿ ಪೇಜ್ ಅವರ ಚಿತ್ರಗಳೇ ಮೆರವಣಿಗೆ ಹೊರಟಿದ್ದವು.

ಲೈಕಾ ಕ್ಯಾಮೆರಾವನ್ನು ಭುಜದ ಮೇಲಿನಿಂದ ತೂಗು ಬಿಟ್ಟುಕೊಂಡು, ಬಾಯಲ್ಲಿ ಹೊಗೆಯಾಡುತ್ತಿದ್ದ ಸಿಗರೇಟ್ ಇಟ್ಟುಕೊಂಡು ಭಾರತ–ಚೀನಾ ಗಡಿಯ ಕಾಡು–ಮೇಡು ಸುತ್ತಾಡಿದವರು ಈ ಪೇಜ್. 1960ರ ದಶಕದಲ್ಲಿ ಅವರು ತೆಗೆದ ಚಿತ್ರಗಳು ಯುದ್ಧಕ್ಕೆ ನೀಡಿದ ದೃಶ್ಯದ ವ್ಯಾಖ್ಯಾನದಂತಿದ್ದವು. ಯುದ್ಧದ ಚಿತ್ರಗಳನ್ನು ಕ್ಲಿಕ್ಕಿಸಿದ ದಶಕಗಳ ಬಳಿಕ ನೀಡಿದ ಸಂದರ್ಶನವೊಂದರಲ್ಲಿ ಪೇಜ್ ಆಡಿದ ಮಾತು, ಅವರ ಮಾಗಿದ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯೂ ಆಗಿತ್ತು. 'ಯಾವುದೇ ಯುದ್ಧದ ಚಿತ್ರಗಳು ವಾಸ್ತವವಾಗಿ ಯುದ್ಧವಿರೋಧಿ ಚಿತ್ರಗಳೂ ಆಗಿರುತ್ತವೆ' ಎಂದವರು ಹೇಳಿದ್ದರು. 'ಯುದ್ಧದ ವರದಿಗಳು ಜನರ ಮೇಲೆ ನಿಶ್ಚಿತ ಪರಿಣಾಮವನ್ನು ಬೀರುತ್ತವೆ ಎಂಬ ವಿಷಯವಾಗಿ ಅನುಮಾನವೇ ಬೇಡ' ಎಂದು ಅಭಿಪ್ರಾಯಪಟ್ಟಿದ್ದರು.

ಪೇಜ್ ಅವರ ವೈಯಕ್ತಿಕ ಬದುಕು ಕೂಡ ಸಂಘರ್ಷಮಯವೇ ಆಗಿತ್ತು. ಅನಾಥರಾಗಿದ್ದ ಅವರು ಬೆಳೆದಿದ್ದು ಇಂಗ್ಲೆಂಡ್‌ನ ಒಂದು ಅನಾಥಾಲಯದಲ್ಲಿ. 'ತಂದೆ–ತಾಯಿಯ ಪ್ರೀತಿಯ ಅಭಾವದ ಮಧ್ಯೆ ಅನಾಥಾಲಯದಲ್ಲಿ ಬೆಳೆದ ಅನುಭವಗಳು ಪೇಜ್‌ಗೆ ಮಾನವೀಯ ಅಂತಃಕರಣವನ್ನು ತುಂಬಿದ್ದವು. ಸಮಾಜದ ಕುರಿತು ಆತ ಭಿನ್ನವಾದ ಒಳನೋಟಗಳನ್ನು ಹೊಂದಿದ್ದ' ಎಂದು ಅವರ ಗೆಳೆಯ, ಮತ್ತೊಬ್ಬ ಫೋಟೊಗ್ರಾಫರ್ ಲ್ಯೂಕ್ ಹಂಟ್ ಹೇಳುತ್ತಾರೆ.

ಪೇಜ್, ಹದಿಹರೆಯದ ಯುವಕನಾಗಿದ್ದಾಗಲೇ ಇಂಗ್ಲೆಂಡ್‌ನಿಂದ ನಿರ್ಗಮಿಸಿದರು. ಆಗ್ನೇಯ ಏಷ್ಯಾದತ್ತ ಪ್ರಯಾಣ ಆರಂಭಿಸಿದ ಅವರು, ಪ್ರವಾಸದ ಖರ್ಚು ನಿಭಾಯಿಸಲು ಮಾದಕ ವಸ್ತುಗಳ ಕಳ್ಳ ಸಾಗಾಟದಲ್ಲೂ ತೊಡಗಿದ್ದರು. ಪಾಕಿಸ್ತಾನ, ಭಾರತ, ಬರ್ಮಾ, ಥಾಯ್ಲೆಂಡ್, ಲಾವೊಸ್ ಗಡಿಗುಂಟ ಓಡಾಡಿದರು. ಬಿರುಗಾಳಿಗೆ ಸಿಕ್ಕ ಹಡಗಿನಂತೆ ಅವರ ಬದುಕು ದಿಕ್ಕು ತಪ್ಪಿಹೋಗಿತ್ತು. ಪೇಜ್ ಅವರ ಆಗ್ನೇಯ ಏಷ್ಯಾಯಾನದ ಆ ಸಂದರ್ಭದಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದವರು ಜಾನ್ ಎಫ್. ಕೆನಡಿ. ವಿಯಟ್ನಾಂನ ಬೆಳವಣಿಗೆಗಳು ಕೆನಡಿ ಅವರನ್ನು ಕೆರಳಿಸಿದ್ದವು. ತನ್ನ ವಿಶ್ವ ದೊಡ್ಡಣ್ಣನ ಪಾತ್ರಕ್ಕೆ ಪೆಟ್ಟು ಬೀಳಲಿದೆ ಎಂದು ಆತಂಕಗೊಂಡ ಅಮೆರಿಕ, ವಿಯಟ್ನಾಂ ವಿರುದ್ಧದ ಯುದ್ಧವನ್ನು ಸಾರಿತು.

ಮಾದಕ ವಸ್ತುಗಳ ಕಳ್ಳ ಸಾಗಾಣಿಕೆದಾರನಾಗಿದ್ದ ಪೇಜ್ ಆ ವೇಳೆಗೆ ಪತ್ರಕರ್ತನಾಗಿ ಬದಲಾಗಿದ್ದರು! 'ಯುನೈಟೆಡ್ ಪ್ರೆಸ್' ಇಂಟರ್‌ನ್ಯಾಷನಲ್ ಸುದ್ದಿ ಸಂಸ್ಥೆಯಲ್ಲಿ ಪತ್ರಕರ್ತರಾಗಿ ಅವರು ಕೆಲಸಕ್ಕೆ ಸೇರಿದ್ದರು. ವಿಯಟ್ನಾಂ ಯುದ್ಧದ ಅಸೈನ್‌ಮೆಂಟ್ ಅವರಿಗೆ ದೊರೆಯಿತು. ಅಂತಿಮವಾಗಿ ಅವರು ನಿರ್ಭೀತ, ಅಸಾಂಪ್ರದಾಯಿಕ ಪತ್ರಕರ್ತರಾಗಿ ಗುರ್ತಿಸಿಕೊಂಡರು. ಅಲ್ಲದೆ, 'ಗೊಂಜೊ' ಫೋಟೊ ಜರ್ನಲಿಸ್ಟ್‌ಗಳ (ಘಟನಾ ಸ್ಥಳದಿಂದ, ಅದರ ತೀವ್ರತೆಯನ್ನು ಅನುಭವಿಸಿ ಪ್ರತ್ಯಕ್ಷ ವರದಿ ಮಾಡುವವರು) ಪ್ರಭೇದದ ಸಂಕೇತವಾಗಿಯೂ ಹೊರಹೊಮ್ಮಿದರು. ಲೇಖಕ ಮೈಕೆಲ್ ಹೆರ್ ತಮ್ಮ ಕೃತಿ 'ಡಿಸ್ಪಾಚೆಸ್'ನಲ್ಲಿ ಪೇಜ್ ಅವರನ್ನು ವಿಯಟ್ನಾಂ ತುಂಬಾ ಹುಚ್ಚನಂತೆ ಓಡಾಡಿದ ವ್ಯಕ್ತಿ ಎಂದು ಬಣ್ಣಿಸಿದ್ದಾರೆ. ಡೆನಿಸ್ ಹಾಪರ್ ಅವರ 'ಅಪೋಕಾಲಿಪ್ಸ್ ನೌ' ಚಿತ್ರಕ್ಕೆ ಪೇಜ್ ಅವರ ಜೀವನವೇ ಸ್ಫೂರ್ತಿ ಎಂದು ಹೇಳಲಾಗುತ್ತದೆ. ಜೈಲುವಾಸವನ್ನೂ ಅನುಭವಿಸಿದ ಪತ್ರಕರ್ತ ಅವರು.

ವಿಯಟ್ನಾಂ, ಪೇಜ್ ಅವರ ವೃತ್ತಿಜೀವನವನ್ನು ಹೇಗೆ ರೂಪಿಸಿತೋ, ವೈಯಕ್ತಿಕ ಬದುಕಿನ ಮೇಲೆ ಹಾಗೆಯೇ ಪೆಟ್ಟು ನೀಡಿತು. ಯುದ್ಧದಲ್ಲಿ ನಾಲ್ಕು ಬಾರಿ ಗಾಯಗೊಂಡ ಅವರಿಗೆ, ಚೇತರಿಸಿಕೊಳ್ಳಲು ಹತ್ತಾರು ವರ್ಷಗಳೇ ಬೇಕಾದವು. ತಾವು ಸಾಕ್ಷಿಯಾದ ಕ್ರೌರ್ಯ ಅವರನ್ನು ಎಷ್ಟೊಂದು ಕಂಗೆಡಿಸಿತ್ತು ಎಂದರೆ ಯುದ್ಧೋತ್ತರ ಮಾನಸಿಕ ಒತ್ತಡದಿಂದಲೂ ಅವರು ಬಳಲಿದರು. ಫೋಟೊ ಜರ್ನಲಿಸ್ಟ್‌ಗಳ ಪಡೆಯನ್ನೇ ಕಟ್ಟಿ ಬೆಳೆಸಿದ ಸಾಧಕ ಅವರು. ಹೀಗಾಗಿ ಜಗತ್ತಿನ ಹಲವು ಫೋಟೊಗ್ರಾಫರ್‌ಗಳು ಪೇಜ್ ಅವರನ್ನು ತಮ್ಮ ಗುರುವೆಂದು ಕರೆದುಕೊಳ್ಳುತ್ತಾರೆ.

ಕಾಂಬೋಡಿಯಾದಲ್ಲೂ ಕೆಲಕಾಲ 'ಎಎಫ್‌ಪಿ'ಗೆ ಫೋಟೊಗ್ರಾಫರ್ ಆಗಿ ಕೆಲಸ ಮಾಡಿದ ಅವರು, ನಿವೃತ್ತಿ ಬಳಿಕ ಪತ್ರಕರ್ತರ ಕಲ್ಯಾಣ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಯುದ್ಧದ ವರದಿಗೆ ತೆರಳಿ ಮೃತಪಟ್ಟ ಪತ್ರಕರ್ತರ ಕುಟುಂಬಗಳಿಗೆ ನೆರವು ನೀಡುವ ಕೆಲಸವನ್ನೂ ಮಾಡುತ್ತಿದ್ದರು. ಯುದ್ಧದಲ್ಲಿ ಮಡಿದ ಫೋಟೊ ಜರ್ನಲಿಸ್ಟ್‌ಗಳ ಇತಿಹಾಸ ದಾಖಲಿಸುವ ಕೃತಿಯನ್ನು ಅವರು 1997ರಲ್ಲಿ ಹೊರತಂದರು. ಯುದ್ಧಭೂಮಿಯಲ್ಲಿ ಸಾವನ್ನಪ್ಪಿದ 135 ಫೋಟೊಗ್ರಾಫರ್‌ಗಳ ಮಾಹಿತಿಯನ್ನು ಅವರು ದಾಖಲಿಸಿದ್ದರು. ಆಸ್ಟ್ರೇಲಿಯಾದಲ್ಲಿ ವಿಶ್ರಾಂತ ಜೀವನ ಸಾಗಿಸುತ್ತಿದ್ದ ಪೇಜ್, ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಬಹುದೊಡ್ಡ ಮಾನವ ಸಂಘರ್ಷಕ್ಕೆ ಸಾಕ್ಷಿಯಾಗಿದ್ದ ಬಿಂಬವೊಂದು ಅವರ ರೂಪದಲ್ಲಿ ಜಗತ್ತಿನಿಂದ ಕಣ್ಮರೆಯಾಗಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65